ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಅರಣ್ಯ ಸಂಚಾರಿ ದಳದ ಸಹಾಯವನ್ನು ಪಡೆಯಲಾಗುತ್ತಿದೆ.

4) ಹೆಚ್ಚು ತೊಂದರೆ ನೀಡುತ್ತಿರುವ ಕಾಡಾನೆಗಳನ್ನು ಅರವಳಿಕೆ ಬಂದೂಕು ಉಪಯೋಗಿಸಿ, ಸೆರೆ ಹಿಡಿದು ಇಲಾಖೆಯ ಆನೆ ಶಿಬಿರಗಳಿಗೆ ಸ್ಥಳಾಂತರಿಸಲಾಗುತ್ತಿದೆ.

5) ಹೆಚ್ಚಿನ ಆನೆ ನಿರೋಧಕ ಕಂದಕಗಳನ್ನು ತೋಡಲು ಉದ್ದೇಶಿಸಲಾಗಿದೆ.

6) ಕಾಡಾನೆಗಳು ಅರಣ್ಯ ಪ್ರದೇಶವನ್ನು ಬಿಟ್ಟು ಹೊರಗೆ ಬರದಂತೆ, ಅರಣ್ಯ ಮಧ್ಯದಲ್ಲಿಯೇ ನೀರು ಸಿಗುವಂತೆ ಕೆರೆಗಳ ನಿರ್ಮಾಣ, ಆಹಾರ ಸಿಗುವಂತೆ ಬಿದುರುಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಕಾಡಾನೆಗಳಿಂದ ಬೆಳೆ ಹಾನಿ ಮತ್ತು ಪ್ರಾಣಹಾನಿಯಾದಾಗ ಸರ್ಕಾರದ ವತಿಯಿಂದ ಪರಿಹಾರ ನೀಡಲಾಗುತ್ತದೆ. ಈಗಾಗಲೇ ಈ ಬಗ್ಗೆ ದಿನಾಂಕ 1.8.92ರ ಸಂಖ್ಯೆ ಎಹೆಚ್‌ಎಫ್‌ಎಫ್ 100 ಎಫ್‌ಡಬ್ಲ್ಯೂಎಲ್ 89ರ ಸರ್ಕಾರಿ ಆದೇಶದಲ್ಲಿ ಪರಿಹಾರಧನ ನೀಡುವ ಬಗ್ಗೆ ಆದೇಶ ಹೊರಡಿಸಲಾಗಿದೆ.

ಪರಿಹಾರಧನವನ್ನು ತ್ವರಿತಗತಿಯಲ್ಲಿ ನೀಡಲು ಎಲ್ಲಾ ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂದಾಪುರ ತಾಲ್ಲೂಕಿನಲ್ಲಿ ಶಿಕ್ಷಕರ ಕೊರತೆ

567 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಪ್ರೌಢಶಾಲೆಗಳಲ್ಲಿ ಅಧ್ಯಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಕೊರತೆಯನ್ನು ಎಂದು ತುಂಬಲಾಗುವುದು?

ಇ) ಶಾಲಾವಾರು ವಿವರ, ಯಾವ ವಿಷಯದ ಅಧ್ಯಾಪಕರ ಕೊರತೆ ಇದೆ? ವಿವರ ನೀಡುವುದು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಂದಿದೆ.

ಆ) ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪಟ್ಟಿ ಲಗತ್ತಿಸಿದೆ

ಕುಂದಾಪುರ ತಾಲ್ಲೂಕಿನಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವ ಶಾಲಾವಾರು ವಿವರಗಳು

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಗಣಿತ	ವಿಜ್ಞಾನ	ಕಲೆ	ಕನ್ನಡ	ಹಿಂದಿ	ಸಂಸ್ಕೃತ	ದೈಸಿ ಗ್ರೇಡ್ -1	ದೈಸಿ ಗ್ರೇಡ್ - 2	ವೃತ್ತಿ	ಒಟ್ಟು
1.	ಸರಕಾರಿ ಪ್ರೌಢಶಾಲೆ ಕೆರೂರು			1	1	1					3
2.	" ವಡೇರಹೋಬಳಿ				1	1		1		1	4
3.	" ಹಡಪಿನಕೋಣೆ	2	1								3
4.	" ಕಲ್ಲೂರು			1							1
5.	"	1	1		1				1		4
6.	" ಆಲ್ಬಾಡಿ ಆರ್ಡಿ	1	1			1					3
7.	" ಸಿದ್ದಪುರ			1	1	1				1	4
8.	" ಕಂಬದಕೋಣೆ		1								1
9.	" ಬಸ್ರೂರು	1	1	1		1					4
10.	" ಆಮಾಸೆಬೈಲು	1	1							1	3
11.	" ಕಿರಿಗುಂಜೇಶ್ವರ		1		1						2
12.	" ಉಪ್ಪಿನಕುದ್ರು	1	1	2	1	1		1			7
13.	" ಕಂಡ್ಲೂರು	1	1	2	1			1			6
14.	" ಹಾಲಾಡಿ	1	1	3	1	1		1		1	9
15.	" ಬೀಳೂರು	1	1	3	1	1		1		1	9
16.	" ವಕ್ವಾಡಿ	1	1	3	1	1		1		1	9

17.	ಸರ್ಕಾರಿ ಕಿ. ಕಾಲೇಜು ಹೊಸಂಗಡಿ		1	2				1			4
18.	" ಕುಂದಾಪುರ	1	1	2	2		1	1			8
19.	" ಬೈಂದೂರು	2	1			1					4
20.	" ಶಂಕರನಾರಾಯಣ	1		1						1	3
21.	" ನಾವುರದ	1			1					1	3
22.	" ಕೋಟೇಶ್ವರ	1	1			1					3
23.	" ಉಪ್ಪುಂದ	1									1
24.	" ತೆಕ್ಕಟ್ಟೆ			1		1			1		3
25.	" ವಂಡ್ಸೆ		1	1		1					3
26.	" ಬಿದ್ಕಲ್‌ಕಟ್ಟೆ		1	1							2
ಒಟ್ಟು		18	18	25	13	13	1	8	2	8	106